ಶ್ರೀ ಕೆ.ಎಸ್. ಈಶ್ವರಪ್ಪ :– ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಬೇಕೆಂದು ಪೋಲೀಸ್ ಬಲದಲ್ಲಿ ಅಲ್ಪಸಂಖ್ಯಾತರಿಗೆ ಮತ್ತು ಬಹುಸಂಖ್ಯಾತರಿಗೆ ಅವಕಾಶ ಆಗಬೇಕೆಂದು ಹೇಳುತ್ತಾ ಹೋದರೆ ದೇಶದಲ್ಲಿ ಅಶಾಂತಿ ಉಂಟಾಗಲು ಕಾರಣವಾಗುತ್ತದೆ. ಈ ದೃಷ್ಟಿಯಿಂದ ರಾಜ್ಯಸರ್ಕಾರ ಯಾರ ಒತ್ತಡಕ್ಕೂ ಮಣಿಯದೆ ತನಗೆ ಸರಿಕಂಡಂತೆ ನೇಮಕಗಳನ್ನು ಮಾಡಬೇಕು ಮತ್ತು ಮಾನ್ಯ ಗೃಹ ಸಚಿವರು ಈ ಬಗ್ಗೆ ಸರಿಯಾದ ಉತ್ತರ ಕೊಟ್ಟು ನೆಮ್ಮದಿಯನ್ನು ಕಾಪಾಡಬೇಕೆಂದು ನಾನು ಅಪೇಕ್ಷೆ ಪಡುತ್ತೇನೆ.

ಶ್ರೀ ಎಂ. ಮಹದೇವ್ :– ಅಧ್ಯಕ್ಷರೇ, ಎಕ್ಸಿಕ್ಯುಟಿವ್ ಮತ್ತು ನಾನ್–ಎಕ್ಸಿಕ್ಯುಟಿವ್ ಅಂದರೆ ಏನು ಎಂದು ನನಗೆ ಕ್ಲಾರಿಫೈ ಆಗಬೇಕಾಗಿದೆ. ಎಕ್ಸಿಕ್ಯುಟಿವ್ ಬಗ್ಗೆ ಎಷ್ಟು ಇಂಟರೆಸ್ಟ್? ಎರಡನೆಯದು ಆಡಳಿತದಲ್ಲಿ ಮೈನಾರಿಟಿ ಮತ್ತು ಮೆಜಾರಿಟಿಗೆ ನ್ಯಾಯ ದೊರಕಿಸಿಕೊಡಿ ಅಂದರೆ ಆಡಳಿತ ನಡೆಸುವುದಾದರೂ ಹೇಗೆ? ಇದರ ಬಗ್ಗೆ ಏನು ಹೇಳುತ್ತಾರೆ?

ಅಧ್ಯಕ್ಷರು :– ನಿಮ್ಮ ಈ ಅಪೇಕ್ಷೆ ಪ್ರಶ್ನೆ ಆಗುವುದಕ್ಕೆ ಸಾಧ್ಯವಿಲ್ಲ. ಮುಂದಿನ ಪ್ರಶ್ನೆ ಶ್ರೀಮತಿ ಮನೋರಮಾ ಮದ್ವರಾಜ್ ಅವರದ್ದು.

ಬೆಟರ್‌ಮೆಂಟ್ ಲೇವಿ ವಸೂಲಿ ಬಗ್ಗೆ

617 ಶ್ರೀಮತಿ ಮನೋರಮ ಮದ್ವರಾಜ್ (ಉಡುಪಿ):– ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉಡುಪಿ – ಮಲ್ಪೆ ನಗರ ಯೋಜನಾ ಪ್ರಾಧಿಕಾರ ಒಟ್ಟಾರೆ ಒಂದು ಎಕರೆ ಕ್ಷೇತ್ರದ ನಿವೇಶನದಲ್ಲಿ 500 ಚ. ಅ. ಕಟ್ಟಡ ಕಟ್ಟಲು ರೂ. 12,000 ಬೆಟರ್‌ಮೆಂಟ್ ಲೆವಿ (ಉತ್ತಮಿಕೆ ಶುಲ್ಕ) ವಸೂಲು ಮಾಡುತ್ತಿರುವುದರಿಂದ ಸಾರ್ವಜನಿಕರಿಗೆ ಅತೀವ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ. ಸರ್ಕಾರ ಈ ಲೆವಿಯನ್ನು ಉದ್ದೇಶಿತ ಕಟ್ಟಡ ಅಕ್ರಮಿತ ಕ್ಷೇತ್ರಕ್ಕೆ ಮಾತ್ರ ಸೀಮಿತಗೊಳಿಸುವುದೆ.

ಆ) ಪರವಾನಗಿ/ಪ್ರಾರಂಭಿಕ ಪ್ರಮಾಣ ಪತ್ರ ಪಡೆಯುವಲ್ಲಿ ಪ್ರಸ್ತುತವಿರುವ ಕಾಲವ್ಯಯಿಸುವ ನಿಯಮ ಹಾಗೂ ನಿಬಂಧನೆಗಳನ್ನು ಸರಳಗೊಳಿಸಿ ಏಕದ್ವಾರ (ಸಿಂಗಲ್ ವಿಂಡೋ) ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತರಲು ಸರ್ಕಾರ ಉದ್ದೇಶಿಸಿದೆಯೇ?

ಇ) ನಗರ ಯೋಜನಾ ಪ್ರಾಧಿಕಾರಕ್ಕೆ ಅಧಿಕಾರೇತರ ಅಧ್ಯಕ್ಷರನ್ನು ನೇಮಿಸದಿರುವುದರಿಂದ ಹಾಗೂ ಜಿಲ್ಲಾಧಿಕಾರಿಗಳು ಮೂರು ತಿಂಗಳಿಗೊಮ್ಮೆ ಕೂಡ ಸಭೆಗಳನ್ನು ನಡೆಸಲು ಸಾಧ್ಯವಾಗದೆ ಇರುವುದರಿಂದ ಪ್ರಾಧಿಕಾರ ಕಛೇರಿಯ ಪತ್ರಗಳ ವಿಲೇವಾರಿಯಲ್ಲಿ ವಿನಾಕಾರಣ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):–

ಅ) ಬೆಟರ್‌ಮೆಂಟ್ ಲೆವಿ ಹಣವನ್ನು ಎರಡು ಹಂತಗಳಲ್ಲಿ ವಸೂಲು ಮಾಡಬಹುದಾಗಿದ್ದು ಮೊದಲನೇ ಹಂತದಲ್ಲಿ ಭೂ ಬದಲಾವಣೆಗೆ ಅನುಮತಿ ನೀಡುವಾಗಲೂ ಎರಡನೇ ಹಂತದಲ್ಲಿ ಕಟ್ಟಡಗಳ ಕ್ಷೇತ್ರ ಆಧರಿಸಿ ಕಟ್ಟಡಗಳಿಗೆ ಅನುಮತಿ ನೀಡುವಾಗಲೂ ವಸೂಲು ಮಾಡಲಾಗುತ್ತದೆ. ಉಡುಪಿ ಮಲ್ಪೆ ಯೋಜನಾ ಪ್ರಾಧಿಕಾರದ ಎಲ್ಲೆಯೊಳಗೆ ಬರುವ ಒಂದು ಎಕರೆ ಪ್ರದೇಶದ ಒಟ್ಟಾರೆ ವಸತಿ ಅಭಿವೃದ್ಧಿಗೆ ರೂ. 6000 ಬೆಟರ್‌ಮೆಂಟ್ ಲೆವಿಯನ್ನು ನೀಡಬೇಕಾಗುತ್ತದೆ. (ಪ್ರತಿ ಚ.ಮಿ. ರೂ. 1.50) 500 ಚದರ ಅಡಿ ಕ್ಷೇತ್ರದ ಕಟ್ಟಡ ಕಟ್ಟಲು ಎರಡು ಹಂತದ ಅಭಿವೃದ್ಧಿ ಶುಲ್ಕವು ಒಟ್ಟು ರೂ. 196.00 ಆಗುತ್ತದೆ.

ಆ) ಎಲ್ಲಾ ಪ್ರಾಧಿಕಾರಗಳು ಬೆಟರ್‌ಮೆಂಟ್ (ಹಣ) ವಸೂಲು ಮಾಡುವುದು ಶಾಸನಬದ್ಧ ಆಗತ್ಯವಾಗಿದೆ. ಯೋಜನಾ ಪ್ರಾಧಿಕಾರಗಳು, ಅಭಿವೃದ್ಧಿ ಯೋಜನೆಗಳ ರೂಪ ಹಾಗೂ ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಅಧಿನಿಯಮಗಳ ಅವಕಾಶಗಳಿಗೆ ಲೋಪಬಾರದಂತೆ, ಇತರ ಸಂಸ್ಥೆ ಹಾಗೂ ಇಲಾಖೆಗಳೊಡನೆ ಆಗತ್ಯವಾದ ಯಾವುದೇ ಪರಸ್ಪರ ಸಮನ್ವಯವನ್ನು ಹೊಂದಿ ವಿಳಂಬವನ್ನು ಕಡಿಮೆಗೊಳಿಸುವಲ್ಲಿ ಮುಕ್ತವಾಗಿವೆ.

ಇ) ಇಲ್ಲ.

ಶ್ರೀಮತಿ ಮನೋರಮಾ ಮಧ್ವರಾಜ್ : —ಈ ಉಡುಪಿ—ಮಲ್ಪೆ ಪ್ರಾಧಿಕಾರದ ಬಗ್ಗೆ ನಿನ್ನೆ ನಾನು 334ರ ನಿಯಮದಲ್ಲೂ ಸಹ ಕೇಳಿದ್ದೆ, ಸಚಿವರು ಉತ್ತರ ಕೊಟ್ಟಿದ್ದಾರೆ. ಸಚಿವರ ಹತ್ತಿರ ನಾನು ಚರ್ಚಿಸಿದ್ದೇನೆ. ಈ ರೀತಿ ಜನರಿಗೆ ತೊಂದರೆಯಾಗುವ ಸಂದರ್ಭದಲ್ಲಿ ನಾನು ಆ ಕಡೆ ಹೂತಾಗಲೂ ಸರ್ಕಾರದ ಗಮನಸೆಳೆದಿದ್ದೇನೆ. ಈಗಲೂ ಅದೇ ಪರಿಸ್ಥಿತಿ ಇದೆ. ದಯವಿಟ್ಟು ಸಚಿವರು ಉಡುಪಿಗೆ ಖುದ್ದು ಬಂದು ಜನಗಳ ದೂರನ್ನು ಕೇಳಬೇಕೆಂದು ವಿನಂತಿಸುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ನಗರಾಭಿವೃದ್ಧಿ ಸಚಿವರು):— ನಮ್ಮ ಪ್ರಾಧಿಕಾರದ ಪ್ರಕಾರ ಎಷ್ಟು ನಾವು ಕನ್‌ವರ್ಟ್ ಮಾಡುತ್ತೇವೆ. ಅದಕ್ಕೆ ಮಾತ್ರ ಅವರು ಬೆಟರ್‌ಮೆಂಟ್ ಜಾರ್ಜ್ ಕೊಡಬೇಕಾಗುತ್ತದೆ. ಉದಾಹರಣೆಗೆ : ಒಂದು ಎಕರೆ ಕನ್‌ವರ್ಟ್ ಮಾಡಿದರೆ ಅಷ್ಟಕ್ಕೆ ಕೊಡಬೇಕಾಗುತ್ತದೆ. ಮನೆ ಕಟ್ಟಲು ಕೇವಲ 500 ಆಡಿ ಕನ್‌ವರ್ಟ್ ಮಾಡಿದರೆ ಅಷ್ಟಕ್ಕೆ ಮಾತ್ರ ಚಾರ್ಜ್ ಕೊಡಬೇಕಾಗುತ್ತದೆ. ಮಾನ್ಯ ಸದಸ್ಯರು ಹೇಳಿದಂತೆ ಈ ಬಗ್ಗೆ ನಾನು ಉಡುಪಿಗೆ ಹೋಗಿ ಸಾರ್ವಜನಿಕ ದೂರುಗಳನ್ನು ವಿಚಾರಿಸುತ್ತೇನೆ.

ಮುಖ್ಯೋಪಾಧ್ಯಾಯರ ನೇಮಕಾತಿ

461 ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದಿರೆ):— ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಗಳೂರು ತಾಲ್ಲೂಕಿನ ಸಸಿಹಿತ್ಲು ಹಿರಿಯ ಪ್ರಾಥಮಿಕ ಶಾಲೆಗೆ ಪದವೀಧರ ಮುಖ್ಯೋಪಾಧ್ಯಾಯರಾಗಿ ಕನ್ನಡ, ಇಂಗ್ಲೀಷ್ ತಿಳಿಯದ ಮುಖ್ಯೋಪಾಧ್ಯಾಯರನ್ನು ನೇಮಕ ಮಾಡಿರುವುದು ನಿಜವೇ; ಶಾಲೆಯ ಕೆಲಸಗಳು ತೊಂದರೆಗೆ ಒಳಗಾಗಿರುವುದು ಸರಕಾರಕ್ಕೆ ತಿಳಿದಿರುವುದೆ;

ಆ) ಊರವರ ಹಾಗೂ ಜನ ಪ್ರತಿನಿಧಿಗಳ ಮನವಿಗಳು ಈ ಕುರಿತು ಬಂದಿರುವುದರಿಂದ ಸರಕಾರದವರು ಕೈಗೊಂಡಿರುವ ಕ್ರಮಗಳಾವುವು;

ಇ) ಸದ್ರಿ ಮುಖ್ಯೋಪಾಧ್ಯಾಯರನ್ನು ವರ್ಗಾಯಿಸಿ ಬೇರೆ ಮುಖ್ಯೋಪಾಧ್ಯಾಯರನ್ನು ನೇಮಕ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ (ಕಂದಾಯ) (ವಿದ್ಯಾಮಂತ್ರಿಗಳ ಪರವಾಗಿ),

(ಅ) (ಆ) ಮತ್ತು (ಇ) ಸಾಕಷ್ಟು ಕನ್ನಡ ಹಾಗೂ ಇಂಗ್ಲೀಷ್ ಪರಿಣತಿ ಇಲ್ಲದ ಅಧ್ಯಾಪಕರನ್ನು ಹೈಯರ್ ಪ್ರೈಮರಿ ಸ್ಕೂಲ್ ಸಸಿಹಿತ್ಲು ಮುಖ್ಯೋಪಾಧ್ಯಾಯರನ್ನು ನೇಮಿಸಿದಿದ್ದುದು ನಿಜ. ಇದರಿಂದ ಶಾಲೆಯ ಕಾರ್ಯಕಲಾಪಗಳಿಗೆ ಸ್ವಲ್ಪ ಮಟ್ಟಿಗೆ ತೊಂದರೆಯಾಗಿದ್ದು ಅವರನ್ನು ಅಲ್ಲಿಂದ ಬೇರೆ ಶಾಲೆಗೆ ವರ್ಗಾವಣೆ ಮಾಡಿ ಅವರ ಸ್ಥಾನದಲ್ಲಿ ಬೇರೆ ಮುಖ್ಯೋಪಾಧ್ಯಾಯರನ್ನು ನೇಮಿಸಲಾಗಿದೆ.

ಶ್ರೀ ಕೆ. ಸೋಮಪ್ಪ ಸುವರ್ಣ :— ನಮ್ಮ ಸಸಿಹಿತ್ಲು ಹಿರಿಯ ಪ್ರಾಥಮಿಕ ಶಾಲೆಗೆ ಬೀದರ್‌ನ ಉಪಾಧ್ಯಾಯರೊಬ್ಬರನ್ನು ಒಬ್ಬ ಮುಖ್ಯೋಪಾಧ್ಯಾಯರನ್ನಾಗಿ ನೇಮಿಸಿದ್ದಾರೆ. ಅವರಿಗೆ ಕನ್ನಡವೂ ಗೊತ್ತಿಲ್ಲ. ಇಂಗ್ಲೀಷೂ ಗೊತ್ತಿಲ್ಲ, ಉರ್ದೂನು ಗೊತ್ತಿಲ್ಲ; ನಾವೇನಾದರೂ ಕೇಳಿದರೆ ಬೇರೆ ಭಾಷೆಗಳು ಬರುವುದಿಲ್ಲ, ಮರಾಠಿ ಬರುತ್ತದೆನ್ನುತ್ತಾರೆ. ತುಳು ಬಲ್ಲಂಥ ಕನ್ನಡ ಕಲಿಯುವ ಮಕ್ಕಳ ಶಾಲೆಗೆ ಇಂತಹವರನ್ನು ಕಳಿಸಿದ್ದಾರೆ. ಕಳೆದ 9 ತಿಂಗಳಿಂದ ಅವರ ಬದಲಿಗೆ ಬೇರೆಯವರ ನೇಮಕವಾಗಬೇಕೆಂದು ಜಿಲ್ಲಾ ಮಟ್ಟದಿಂದ. ವಿಭಾಗ ಮಟ್ಟದಿಂದ ಹಿಡಿದು ವಿದ್ಯಾ ಸಚಿವರನ್ನು ಕೊನೆಗೆ ಮುಖ್ಯ ಮಂತ್ರಿಗಳನ್ನು ಸಹ ಕಂಡಿದ್ದೆ. ಈಗ ಹುಳಿ ಹೋಗಿದೆ; ಆದರೂ ಬದಲಾವಣೆ ಆಗಿಲ್ಲ 9 ತಿಂಗಳಾಯಿತು; ಇನ್ನಾದರೂ ಕನ್ನಡ ಮೇಸ್ಟರನ್ನು ನೇಮಿಸಬೇಕು. ನಮ್ಮ ಕಡೆ ಮುಖ್ಯೋಪಾಧ್ಯಾಯರನ್ನು ತಲೆಯ ಮೇಲಿನ ಮಂಡೆಗೆ ಹೋಲಿಸುವರು; ನಮ್ಮ ಶಾಲೆಯಲ್ಲಿ ಈಗ ಕನ್ನಡ ಮುಖ್ಯೋಪಾಧ್ಯಾಯರಿಲ್ಲದಿರುವುದರಿಂದ ಮಂಡೆ ಇಲ್ಲದ ಶಾಲೆ ಎನ್ನುತ್ತಾರೆ. ಆದ್ದರಿಂದ ನಮ್ಮ ದುರಾದೃಷ್ಟ ಶಾಲೆಗೆ ಮಂಡೆಯನ್ನು ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.